ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (33) 110
ಸದಸ್ಯರ ಹೆಸರು : ಶ್ರೀ. ರೋಷನ್ ಬೇಗ್. ಆರ್
ಉತ್ತರಿಸಬೇಕಾದ ಸಚಿವರು : ಶ್ರೀ ಹೆಚ್. ಹಾಲಪ್ಪ
(ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸೀಮೆಎಣ್ಣೆ ವಿತರಣೆಯಲ್ಲಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಪ್ರತಿ ಪಡಿತರ ಚೀಟಿಗೆ ಎಷ್ಟು ಲೀಟರ್ ಸೀಮೆಎಣ್ಣೆ ಒದಗಿಸಲಾಗುತ್ತಿದೆ;	ಅನೌಪಚಾರಿಕ ಪಡಿತರ ಪ್ರದೇಶದಲ್ಲಿರುವ ಅನಿಲ ರಹಿತ ಪಡಿತರ ಚೀಟಿಗಳಿಗೆ ತಲಾ 7 ಲೀಟರ್, ನಗರ ಪ್ರದೇಶದಲ್ಲಿ 5 ಲೀಟರ್ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 4 ಲೀಟರ್‌ನಂತೆ ವಿತರಿಸಲಾಗುತ್ತಿದೆ.
ಇ)	ಸೀಮೆಎಣ್ಣೆ ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲವಾದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ (ವಿವರ ನೀಡುವುದು);	ಸೀಮೆಎಣ್ಣೆ ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲವಾದಲ್ಲಿ ಅಗತ್ಯ ವಸ್ತುಗಳ ಕಾಯ್ದೆ 1955 ಹಾಗೂ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಂತ್ರಣ ಆದೇಶ 1992 ರಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.
ಈ)	ಬೆಂಗಳೂರಿನಲ್ಲಿ ಎಷ್ಟು ಫಲಾನುಭವಿಗಳಿಗೆ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ನ್ನು ವಿತರಿಸಲಾಗಿದೆ;	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಈ ತನಕ ವಿತರಣೆಯಾಗಿರುವ ಒಟ್ಟು ಪಡಿತರ ಚೀಟಿಗಳ ವಿವರ; ಎಎವೈ – 18,608 ಬಿಪಿಎಲ್ – 1,91,228 ಎಪಿಎಲ್ – 8,26,129 ಒಟ್ಟು – 10,35,963
ಉ)	ಸದರಿ ಕಾರ್ಯವನ್ನು ನಿರ್ವಹಿಸಲು ಖಾಸಗಿಯವರಿಗೆ ವಹಿಸಲಾಗಿದೆಯೇ;	ಪಡಿತರ ಚೀಟಿ ಗಣಕೀಕರಣ ಕಾರ್ಯವನ್ನು ಮ; ಕೊಮ್ಯಾಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಗೆ ವಹಿಸಲಾಗಿದೆ.
ಊ)	ಹಾಗಿದ್ದಲ್ಲಿ, ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ (ವಿವರ ನೀಡುವುದು)?	ಯಾವುದೂ ಇಲ್ಲ.